ತಿಮ್ಮಣ್ಣ ಆಲದ ಗಿಡ ನೋಡಿದಂತೆ ತಿನ್ನುವವರ ಥರ ನೋಡ್ತಿದ್ದ. ಮತ್ತೆ ಒಂದೊಂದು ಸಲ ಅವಳು ನೋಡತೊಡಗಿದ್ದು ಗೊತ್ತಾದರೂ ಸುಮ್ಮನೇ ಇದ್ದು ಬಿಡ್ತಿದ್ದ. ಅವಳಿಗೆ ಇದು ಭಾಳ ಪೇಚಿಗಿಟ್ಟುಕೊಂಡಿತ್ತು. ಒಮ್ಮೆಯಂತೂ ಅವಳ ಸೆರಗು ಜಾರಿಬಿದ್ದು, ರಂಗೋಲಿ ಕಲರಿನ ಕೆಂಪನೆಯ ಎದೆ ಕಂಡಾಗಲೂ ತಿಮ್ಮಣ್ಣನದು ಅದೇ ನಿರ್ಲಿಪ್ತ ಸ್ವಭಾವ. ತಿಮ್ಮಣ್ಣನ ನಿರ್ಲಿಪ್ತ ಭಾವಕ್ಕೆ 'ಊರ ನನ ಹಾಟ್ಯಾ' ಅಂತ ಬೈಕೊಂಡಿದ್ದ ವೈಶಾಲಿ ಆಮೇಲೆ ಸೆರಗು ಸರಿ ಮಾಡಿಕೊಂಡಿದ್ದಳು. ರಂಗೋಲಿ ಹಾಕಲು, ಮುಸುರೆ ತಿಕ್ಕಲು, ಅರಿವೆ ಒಣ ಹಾಕಲು ಅಂಗಳಕೆ ಬಂದಾಗೆಲ್ಲಾ ಪಕ್ಕದ್ಮನೆ ವೈಶಾಲಿ ವಾರೆಗಣ್ಣಲ್ಲಿ ನೋಡುತ್ತಿದ್ದಳು. ಅದು ಎಷ್ಟು ಜಾಸ್ತಿ ಆಗಿತ್ತೆಂದರೆ ಹೊರಗೆ ಬಂದಾಗೊಮ್ಮೆ ವೈಶಾಲಿ ಕಣ್ಣು ತಿಮ್ಮಣ್ಣ ಕೂರುತ್ತಿದ್ದ ಬಾಲ್ಕನಿ ಜಾಗದ ಕಡೆ ನೋಡದೆ ದೃಷ್ಟಿ ಬೇರೆ ಕಡೆ ಹಾಯ್ತಿರಲಿಲ್ಲ. 'ಇಂವಾ ಹಿಂಗ ಯಾಕ ಮಾಡ್ತಾನ? ನೆಟ್ಟಗಣ್ಣ ನೆಟ್ಟು ಬರೇ ಮ್ಯಾಗ ಮಖಯಿಟ್ಟು ಅದೇನ್ ನೋಡ್ತಾನ? ಮಾತಿಲ್ಲ, ಕಥಿ ಇಲ್ಲ ಅದೆಂಥಾದಿದು? ಆ ಗಿಡದಾಗ ಅಂಥದ್ದೇನಾದ್ರೂ ಐತ್ಯಾ? ಹೀಗೆ ತನ್ನೊಳಗೆ ವಿಚಾರಕ್ಕೆ ಜಾರುತ್ತಿದ್ದಳು ವೈಶಾಲಿ. ಹೀಗೆ ವಿಚಾರ ಮಾಡೋವಾಗೆಲ್ಲಾ ಅವಳ ಮನಸಿನಲ್ಲೂ ಒಂಥರ ಕಂಬಳಿ ಹುಳ ತೆವಳಿದಂಗಾಗುವಂತಹ ಅನುಭವ.

ಅವತ್ತೊಂದಿನ ಬೆಳಿಗ್ಗೆ ಎದ್ದು ರಂಗೋಲಿ ಹಾಕಲು ಅಂಗಳಕೆ ಬಂದಿದ್ದ ವೈಶಾಲಿ ಜಾರಿಬಿದ್ದ ಸೆರಗಿನ ಖಬರು ಇಲ್ಲದಂತೆ ತೆಳ್ಳನೆಯ ರಂಗೋಲಿ ಪೌಡರನ್ನು ಇಟೀಟೆ ನೆಲದ ಮೇಲೆ ಚುಕ್ಕಿ ಇಟ್ಟಂತೆ ಇಡತೊಡಗಿದ್ದಳು. ಬಾಲ್ಕನಿಯಲಿದ್ದ ತಿಮ್ಮಣ್ಣನ ಕಂಡು ಆಗೀಗ ಅತ್ತ ನೋಡುತ್ತಲೇ ಕರಿ ನೆಲದ ಮೇಲೆ ಬಿಳಿ ರಂಗೋಲಿಯನ್ನು ಇಳಿಸತೊಡಗಿದ್ದಳು. ಅವಳ ಕೆಂಪನೆಯ ಎದೆ ಆ ಕ್ಷಣಕ್ಕೆ ಸೂರ್ಯನ ಎಳೆ ಬಿಸಿಲಿಗೂ ಸೆಡ್ಡು ಹೊಡೆಯುವಂತೆ ತಿಮ್ಮಣ್ಣನಿಗೆ ಕಂಡಿರಬೇಕು. ದಿನವೂ ಗಮನಹರಿಸದ ಅವನೂ ಅವತ್ತು ವೈಶಾಲಿಯತ್ತ ಕಣ್ಣು ಬಿಟ್ಟುಕೊಂಡು ನಿಂತಿದ್ದ. ಅವನ ಸಹಜ ದೃಷ್ಟಿಯೂ ಎದುರಿದ್ದವರಿಗೆ ಕೆಟ್ಟದಾಗೇ ಕಾಣುತ್ತಿತ್ತು. ಅವತ್ತು ನಿದ್ದೆಯಿಂದೆದ್ದು ಮೈ ಮುರಿಯುತ್ತ ಹೊರಗೆ ಬಂದ ವೈಶಾಲಿ ಗಂಡ ಶ್ಯಾಮಣ್ಣ, ಜಾರಿಬಿದ್ದ ಹೆಂಡತಿಯ ಸೆರಗು ನೋಡಿದ. ರಾತ್ರಿಗಿಂತ ಚೆಂದ ಕಾಣಿಸ್ತಿದಾಳಲ ಅಂತ ಆ ಕ್ಷಣಕ್ಕೆ ಅನಿಸಿದರೂ, ಅವನಿಗೆ



ಏನು ಅನಸ್ತೋ? ಬಾಜುಮನಿಯ ಬಾಲ್ಕನಿಯಲಿ ನಿಂತಿದ್ದ ತಿಮ್ಮಣ್ಣನ ಕಡೆ ನೋಡಿದ. ತಿಮ್ಮಣ್ಣನಿಗೆ ಶ್ಯಾಮಣ್ಣ ತನ್ನನ್ನೇ ನೋಡತೊಡಗಿದ್ದು ಗಮನಕ್ಕೆ ಬಂದರೂ ವೈಶಾಲಿಯನ್ನೇ ನೋಡುವುದನ್ನು ಬಿಟ್ಟಿರಲಿಲ್ಲ. ಗಂಡ ಬಂದದ್ದು ಕಂಡ ಕೂಡಲೇ ವೈಶಾಲಿ ಸೆರಗನ್ನು ಎದೆಯ ಮೇಲೆ ಹಾಕಿಕೊಳ್ಳುತ್ತ 'ಸಾಕಾಗೇತಿ ನನಗಂತೂ ಕೆಲಸ ಮಾಡಿ, ಮಾಡಿ. ಬರೇ ಹ್ವಾರೇ ಮಾಡಿ ಸಾಯಾದ ಆಕ್ಕೈತೇನೋ ಈ ಮನ್ಯಾಗ?' ಒಟಗುಟ್ಟಲು ಚಾಲೂ ಮಾಡಿದಳು. ಗಂಡನ ಮುಖದ ಮೇಲಿನ ಗೆರೆಗಳಲ್ಲಿ ಏನೋ ಬದಲಾವಣೆ ಆಗಿದ್ದು ಆ ಕ್ಷಣಕ್ಕೆ